**ಕರ್ನಾಟಕ ಸರ್ಕಾರ**

ಸಂಖ್ಯೆಸಂವ್ಯಶಾಇ 02 ಶಾಸನ 2025

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ : 29.01.2025

**ಅಧಿಸೂಚನೆ**

ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ಅಧ್ಯಾದೇಶ, 2025 ಇದಕ್ಕೆ 2025 ರ ಜನವರಿ ತಿಂಗಳ 29ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2025 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ : 01 ಎಂಬುದಾಗಿ ಪ್ರಕಟಿಸಲು ಹಾಗೂ ಭಾರತ ಸಂವಿಧಾನದ ಅನುಚ್ಛೇದ 348ರಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ಸದರಿ ಅಧ್ಯಾದೇಶದ ಆಂಗ್ಲ ಭಾಷಾಂತರವನ್ನು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**XX** **XX** **XX**

(**XX** ಲಗತ್ತಿಸಲಾದ ವಿಷಯವನ್ನು ಇಲ್ಲಿ ಸೇರಿಸತಕ್ಕದ್ದು)

1. ಕರ್ನಾಟಕ ರಾಜ್ಯಪತ್ರದ ಸಂಕಲನಕಾರರು, ಬೆಂಗಳೂರು, ಇವರಿಗೆ **ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯ ಭಾಗ-IV ರಲ್ಲಿ ದಿನಾಂಕ: 29.01.2025 ರಂದು ಪ್ರಕಟಿಸಬೇಕೆಂದು** ಕೋರಿದೆ .
2. ನಿರ್ದೇಶಕರು, ಭಾಷಾಂತರ ನಿರ್ದೇಶನಾಲಯ, ವಿವಿ ಗೋಪುರ ಬೆಂಗಳೂರು.

**ಪ್ರತಿಗಳು:**

1. ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಬೆಂಗಳೂರು. (ಪ್ರಸ್ತಾವಿತ ಅಧ್ಯಾದೇಶದ ಪ್ರತಿಗಳನ್ನು ನೇರವಾಗಿ https://erajyapatra.karnataka.gov.in/ ಪಡೆದುಕೊಳ್ಳುವಂತೆ ಕೋರಲಾಗಿದೆ)
2. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿ, ರಾಜಭವನ ಬೆಂಗಳೂರು. (ಮೇಲ್ಪತ್ರದೊಂದಿಗೆ)
3. ನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು (ಮೇಲ್ಪತ್ರದೊಂದಿಗೆ)
4. ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರ ಆಪ್ತ ಕಾರ್ಯದರ್ಶಿ.
5. ಸಚಿವ ಸಂಪುಟ ಶಾಖೆ. (ಸಿ: 64/2025)
6. ಪ್ರಕಟಣಾ ಶಾಖೆ: ಕ್ರೋಢೀಕರಣ ಶಾಖೆ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.
7. ಬಿಡಿ ಪ್ರತಿಗಳು.

## 2025 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ:

## ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ಅಧ್ಯಾದೇಶ, 2025

(ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಪ್ರಖ್ಯಾಪಿತವಾಗಿ 2025ರ ಜನವರಿ ತಿಂಗಳ 24ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರಡಿ ಆರ್ಜಿಸಿರುವ ಬೆಂಗಳೂರು ಅರಮನೆಯ ಭೂ ಬಳಕೆ ಮತ್ತು ನಿಯಂತ್ರಣ ಹಾಗೂ ಬೆಂಗಳೂರು ಅರಮನೆಗೆ ಸಂಬಂಧಿಸಿರುವ, ಈಗ ಕರ್ನಾಟಕ ರಾಜ್ಯದೊಂದಿಗೆ ನಿಹಿತವಾಗಿರುವ ಭೂಮಿಯ ನಷ್ಟಪರಿಹಾರವನ್ನು ನಿರ್ಧರಿಸಲು ಒಂದು ಅಧ್ಯಾದೇಶ.

ಬೆಂಗಳೂರು ಅರಮನೆಯ ಒಟ್ಟಾರೆ ವ್ಯಾಪ್ತಿಯ 472 ಎಕರೆಗಳು ಮತ್ತು 16 ಗುಂಟೆಗಳ ಒಟ್ಟು ಮೌಲ್ಯವನ್ನು ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ 8 ಮತ್ತು 9ನೇ ಪ್ರಕರಣಗಳ ಅನುಸಾರವಾಗಿ ರೂ. 11 ಕೋಟಿಗಳೆಂದು ನಿರ್ಧರಿಸಲಾಗಿರುವುದರಿಂದ;

ಮತ್ತು ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ ಸಾಂವಿಧಾನಿಕ ಸಿಂಧುತ್ವವನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಎತ್ತಿಹಿಡಿದಿರುವುದರಿಂದ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೂಲಕ ಅಪೀಲಿನಲ್ಲಿ ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ ಕಾರ್ಯಾಚರಣೆಯ ಮೇಲೆ ಯಾವುದೇ ತಡೆಯಾಜ್ಞೆ ಇಲ್ಲದಿರುವುದರಿಂದ;

ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯವು 2021ರ ನ್ಯಾಯಾಂಗ ನಿಂದನಾ ಪ್ರಕರಣ ಸಂ. 688 ಇತ್ಯಾದಿರಲ್ಲಿನ ದಿನಾಂಕ:10.12.2024ರ ತೀರ್ಪಿನ ಮೂಲಕ ರಸ್ತೆ ಅಗಲೀಕರಣದ ಉದ್ದೇಶಕ್ಕಾಗಿ ಗುರುತಿಸಲಾದ ಬೆಂಗಳೂರು ಅರಮನೆಯ ಭಾಗದ ಮೌಲ್ಯವನ್ನು ನಿರ್ಣಯಿಸಿ, ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ 45ಬಿ ಪ್ರಕರಣದ ಪ್ರಕಾರ ಅಕ್ಕಪಕ್ಕದ ಪ್ರದೇಶಗಳ ಚಾಲ್ತಿಯಲ್ಲಿರುವ ಮಾರ್ಗಸೂಚಿ ಮೌಲ್ಯಕ್ಕೆ ಅನುಸಾರವಾಗಿ ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳನ್ನು ಮಂಜೂರು ಮಾಡುವಂತೆ ನಿರ್ದೇಶಿಸಿರುವುದರಿಂದ;

ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪು ರಾಜ್ಯ ಸರ್ಕಾರದ ಬೊಕ್ಕಸದ ಮೇಲೆ ಹಾಗೂ ಬೆಂಗಳೂರು ನಗರದ ನಗರ ಯೋಜನೆಯ ಮೇಲೆ ಗಂಭೀರವಾದ ಪರಿಣಾಮವನ್ನು ಬೀರುವುದರಿಂದ. ಮುಂದುವರೆದು ಇದು ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ ಅನುಸಾರ ನಿರ್ಧರಿಸಲಾದ ಒಟ್ಟು ನಷ್ಟ ಪರಿಹಾರಕ್ಕೆ ಸುಸಂಗತವಾಗದಿರುವುದರಿಂದ;

ಮತ್ತು ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ ಸಾಂವಿಧಾನಿಕ ಸಿಂಧುತ್ವಕ್ಕೆ ಸಂಬಂಧಿಸಿದಂತೆ ಸಿವಿಲ್ ಅಪೀಲುಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಪರ್ಯಾಲೋಚನೆಗೆ ಬಾಕಿಯಿರುವುದರಿಂದ, ಮತ್ತು ಅಭಿವೃದ್ಧಿ ಹಕ್ಕುಗಳ ವರ್ಗಾವಣೆಯು ವಿಪರ್ಯಯಗೊಳ್ಳದಿರುವ ಪ್ರಕ್ರಿಯೆಯಾಗಿದ್ದು, ಅದು ರಾಜ್ಯದ ಮೇಲೆ ತೀವ್ರ ಸಂಕೀರ್ಣ ಪರಿಣಾಮವನ್ನು (ramification) ಬೀರುವುದರಿಂದ;

ಮತ್ತು ರಾಜ್ಯ ವಿಧಾನಮಂಡಲದ ಕರ್ನಾಟಕ ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ಅಧಿವೇಶನದಲ್ಲಿ ಇಲ್ಲದಿರುವುದರಿಂದ ಮತ್ತು ಭಾರತ ಸಂವಿಧಾನದ 213 (1)ನೇ ಅನುಚ್ಛೇದದ ಮೇರೆಗಿನ ಅಧಿಕಾರಗಳನ್ನು ಚಲಾಯಿಸಲು ಅವಶ್ಯಕ ಮತ್ತು ಯುಕ್ತವಾದ ಸನ್ನಿವೇಶಗಳು ಉದ್ಭವವಾಗಿವೆಯೆಂದು ಮಾನ್ಯ ಕರ್ನಾಟಕ ರಾಜ್ಯಪಾಲರು ಮನಗಂಡಿರುವುದರಿಂದ, ಈ ಮುಂದಿನ ಅಧ್ಯಾದೇಶವನ್ನು ಪ್ರಖ್ಯಾಪಿಸುವರು, ಎಂದರೆ :-

**1. ಸಂಕ್ಷಿಪ್ತ ಹೆಸರು, ಅನ್ವಯ ಮತ್ತು ಪ್ರಾರಂಭ.-** (1) ಈ ಅಧ್ಯಾದೇಶವನ್ನು ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ಅಧ್ಯಾದೇಶ, 2025 ಎಂದು ಕರೆಯತಕ್ಕದ್ದು.

(2) ಈ ಅಧ್ಯಾದೇಶವು ಬೆಂಗಳೂರು ಅರಮನೆಗೆ ಅನ್ವಯವಾಗತಕ್ಕದ್ದು.

(3) ಇದು 27.01.2025ರಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ಅಧ್ಯಾದೇಶದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು:

(ಎ) "**ಬೆಂಗಳೂರು ಅರಮನೆ**" ಯು ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ 2ನೇ ಪ್ರಕರಣದ ಖಂಡ (2)ರಲ್ಲಿ ಪರಿಭಾಷಿಸಲಾದಂತೆ ಅದೇ ಅರ್ಥವನ್ನು ಹೊಂದಿರತಕ್ಕದ್ದು.

(ಬಿ) "**ಮೂಲಸೌಕರ್ಯ ಯೋಜನೆ**"ಯು ಹೆಚ್ಚಿನ ಸಾರ್ವಜನಿಕ ಹಿತಾಸಕ್ತಿಯಲ್ಲಿನ ಯಾವುದೇ ಮೂಲ ಸೌಕರ್ಯ ಯೋಜನೆಯನ್ನು ಒಳಗೊಳ್ಳತಕ್ಕದ್ದು.

(ಸಿ) "**ಕ್ಲೇಮುದಾರರು**" ಎಂಬುದು,

(i) ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ 2ನೇ ಪ್ರಕರಣದ (5) ನೇ ಖಂಡದಲ್ಲಿ ಪರಿಭಾಷಿಸಲಾದಂತೆ "**ಕಾನೂನುಸಮ್ಮತ ಪ್ರತಿನಿಧಿಗಳು**" ಮತ್ತು "**ವಾರಸುದಾರರು**" ಎಂಬ, ಹಾಗೂ

(ii) ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ 2ನೇ ಪ್ರಕರಣದ (6) ನೇ ಖಂಡದಲ್ಲಿ ಪರಿಭಾಷಿಸಲಾದಂತೆ "**ಇತರರು**" "**ಇತರ ವ್ಯಕ್ತಿಗಳು**" ಮತ್ತು "**ಇತರ ಹಿತಾಸಕ್ತ ವ್ಯಕ್ತಿಗಳು**" ಎಂಬ,

- ಅದೇ ಅರ್ಥವನ್ನು ಹೊಂದಿರತಕ್ಕದ್ದು.

(ಡಿ) "**ನಷ್ಟಪರಿಹಾರ**"ವು ಸಂದಾಯ ಮಾಡಬಹುದಾದ ಯಾವುದೇ ಮೊತ್ತವನ್ನು ಒಳಗೊಳ್ಳತಕ್ಕದ್ದು ಮತ್ತು ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳನ್ನೂ ಸಹ ಒಳಗೊಳ್ಳತಕ್ಕದ್ದು.

(ಇ) "**ಕಮೀಷನರ್**" ಎಂಬುದು ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ 2ನೇ ಪ್ರಕರಣದ (4)ನೇ ಖಂಡದಲ್ಲಿ ಪರಿಭಾಷಿಸಲಾದಂತೆ ಅದೇ ಅರ್ಥವನ್ನು ಹೊಂದಿರತಕ್ಕದ್ದು.

(ಎಫ್) "**ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳು**" ಎಂಬುದು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ಅಭಿವೃದ್ಧಿ ಹಕ್ಕುಗಳ ಪ್ರಯೋಜನ) ನಿಯಮಗಳು, 2016ರೊಂದಿಗೆ ಓದಿಕೊಂಡಂತೆ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ 14ಬಿ ಪ್ರಕರಣದ (28)ನೇ ಉಪ ಪ್ರಕರಣದ (ಕೆ) ಖಂಡದಲ್ಲಿ ಪರಿಭಾಷಿಸಲಾದಂತೆ ಅದೇ ಅರ್ಥವನ್ನು ಹೊಂದಿರತಕ್ಕದ್ದು.

(ಜಿ) "**ರಾಜ್ಯ ಸರ್ಕಾರ**" ಎಂದರೆ ಕರ್ನಾಟಕ ಸರ್ಕಾರ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಂತಹ ಕರ್ನಾಟಕ ಸರ್ಕಾರದ ಅಂಗಮಾಧ್ಯಮಗಳನ್ನೂ (instrumentalities) ಒಳಗೊಳ್ಳತಕ್ಕದ್ದು.

**3. ಮೂಲಸೌಕರ್ಯ ಯೋಜನೆಗಾಗಿ ಭೂಮಿಯ ಬಳಕೆ.**- (1) ಯಾವುದೇ ಮೂಲಸೌಕರ್ಯ ಯೋಜನೆಯ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ 4ನೇ ಪ್ರಕರಣದಲ್ಲಿ ಬರುವ ಬೆಂಗಳೂರು ಅರಮನೆಯ ಯಾವುದೇ ಭಾಗವನ್ನು ಬಳಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(2) ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು ಅಥವಾ ಆದೇಶ ಅಥವಾ ರಾಜ್ಯ ಸರ್ಕಾರವು ಈ ಮೊದಲು ತೆಗೆದುಕೊಂಡ ಯಾವುದೇ ತೀರ್ಮಾನದಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು (1)ನೇ ಉಪಪ್ರಕರಣದಲ್ಲಿನ ಯಾವುದೇ ಮೂಲಸೌಕರ್ಯ ಯೋಜನೆಗೆ ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ಮುಂದುವರೆಯದಿರಲು ಅಧಿಕಾರವನ್ನು ಹೊಂದಿರತಕ್ಕದ್ದು.

(3) ರಾಜ್ಯ ಸರ್ಕಾರವು (2)ನೇ ಉಪಪ್ರಕರಣದಲ್ಲಿನ ಯಾವುದೇ ಮೂಲಸೌಕರ್ಯ ಯೋಜನೆಗೆ ಮುಂದುವರೆಯದಿರಲು ತೀರ್ಮಾನಿಸಿದಲ್ಲಿ, ಅದು,-

(ಎ) ಉಪಪ್ರಕರಣ (1)ರಡಿ ಬಳಸಲು ಉದ್ದೇಶಿಸಿರುವ ಆದರೆ ತರುವಾಯ ಉಪಪ್ರಕರಣ (2)ರಡಿ ಮುಂದುವರೆಯದಿರುವ ಅಥವಾ ಬಳಸದಿರುವ ಬೆಂಗಳೂರು ಅರಮನೆಯ ಭಾಗಾಂಶದ ಭಾಗವನ್ನು ಪೂರ್ವಸ್ಥಿತಿಗೆ ತರತಕ್ಕದ್ದು;

(ಬಿ) ಈ ಮೊದಲು ಅಂಥ ಭೂಮಿಯನ್ನು ಉಪಪ್ರಕರಣ (1)ರಡಿ ಬಳಸಲು ಉದ್ದೇಶಿಸಿರುವ ಆದರೆ ತರುವಾಯ ಉಪಪ್ರಕರಣ (2)ರಡಿ ಮುಂದುವರೆಯದಿರುವ ಅಥವಾ ಬಳಸದಿರುವ ಬೆಂಗಳೂರು ಅರಮನೆಯ ಭಾಗಾಂಶದ ಭಾಗದ ಸ್ವಾಧೀನವನ್ನು ಪೂರ್ವಸ್ಥಿತಿಗೆ ತರತಕ್ಕದ್ದು; ಮತ್ತು

(ಸಿ) (ಎ) ಮತ್ತು (ಬಿ)ಗಳಿಗಾಗಿನ ಒಟ್ಟಾರೆ ವೆಚ್ಚವನ್ನು ಭರಿಸತಕ್ಕದ್ದು.

(4) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, (1)ನೇ ಉಪಪ್ರಕರಣದಡಿ ಬೆಂಗಳೂರು ಅರಮನೆಯ ಭಾಗಾಂಶದ ಯಾವುದೇ ಭಾಗವನ್ನು ರಾಜ್ಯ ಸರ್ಕಾರವು ಬಳಸಿದ್ದರೆ, 4ನೇ ಪ್ರಕರಣದಡಿ ಈ ಅಧ್ಯಾದೇಶದ ಅನುಸಾರ ರಾಜ್ಯ ಸರ್ಕಾರವು ಕ್ಲೇಮುದಾರರಿಗೆ ನಷ್ಟಪರಿಹಾರವನ್ನು ಪಾವತಿಸತಕ್ಕದ್ದು.

**4. ಬಳಕೆಗಾಗಿ ಸಂದಾಯ ಮಾಡಬಹುದಾದ ನಷ್ಟಪರಿಹಾರ.-** (1) ಈ ಅಧ್ಯಾದೇಶಕ್ಕೆ ವಿರುದ್ಧವಾದುದು, ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು ಅಥವಾ ಯಾವುದೇ ಆದೇಶ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ನಷ್ಟಪರಿಹಾರದ ಉದ್ದೇಶಕ್ಕಾಗಿ ಭೂಮಿಯ ಮಾರ್ಗಸೂಚಿ ಮೌಲ್ಯವು ಈ ಅಧ್ಯಾದೇಶದ ಅನುಸಾರವಾಗಿರತಕ್ಕದ್ದು.

(2) ಈ ಅಧ್ಯಾದೇಶದ 3ನೇ ಪ್ರಕರಣದ (1)ನೇ ಉಪಪ್ರಕರಣದಡಿ ಬಳಸಲಾದ ಬೆಂಗಳೂರು ಅರಮನೆಯ ಯಾವುದೇ ಭಾಗಕ್ಕಾಗಿನ ನಷ್ಟಪರಿಹಾರದ ಲೆಕ್ಕಾಚಾರದ ಉದ್ದೇಶಕ್ಕಾಗಿ, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ 8ನೇ ಪ್ರಕರಣ ಮತ್ತು 9ನೇ ಪ್ರಕರಣದ ಅನುಸಾರವಾಗಿ ಪ್ರಮಾಣಾನುಸಾರ ಮೌಲ್ಯವಾಗಿರತಕ್ಕದ್ದು; ಅದನ್ನು ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರಡಿ ಗೊತ್ತುಪಡಿಸಿದ ದಿನಾಂಕದಿಂದ ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ 45ಬಿ ಪ್ರಕರಣದಡಿ ಮಾರ್ಗಸೂಚಿ ಮೌಲ್ಯವೆಂದು ಭಾವಿಸತಕ್ಕದ್ದು.

**ವಿವರಣೆ I.-** "ಮಾರ್ಗಸೂಚಿ ಮೌಲ್ಯ" ನಿರ್ಧರಣೆಗಾಗಿ, ಯಾವುದೇ ತೀರ್ಪು ಅಥವಾ ನ್ಯಾಯಾಲಯದ ಆದೇಶದ ವಿರುದ್ಧವಾಗಿ ಏನೇ ಇದ್ದರೂ, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ ಪ್ರಕಾರ ಮೌಲ್ಯನಿರ್ಧರಣೆಯನ್ನು ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ 45ಬಿ ಪ್ರಕರಣದಡಿ ಮಾರ್ಗಸೂಚಿ ಮೌಲ್ಯವೆಂದು ಭಾವಿಸತಕ್ಕದ್ದು.

**ವಿವರಣೆ II.-** "ಗೊತ್ತುಪಡಿಸಿದ ದಿನಾಂಕ" ಎಂಬ ಪದಾವಳಿಯು, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ 2ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಇರುವ ಅದೇ ಅರ್ಥವನ್ನು ಹೊಂದಿರತಕ್ಕದ್ದು, ಅಂದರೆ 21.11.1996.

(3) ಕ್ಲೇಮುದಾರನಿಗೆ ಸಂದಾಯ ಮಾಡಬಹುದಾದ ನಷ್ಟಪರಿಹಾರವು ಈ ಮುಂದಿನಂತಿರತಕ್ಕದ್ದು:

(ಎ) ಭೂ ವ್ಯಾಪ್ತಿಯ ಪ್ರಮಾಣಾನುಸಾರ (2)ನೇ ಉಪಪ್ರಕರಣದ ಪ್ರಕಾರ ಪ್ರಮಾಣಾನುಸಾರ ಮೌಲ್ಯದ ಮೊತ್ತ ಅಥವಾ ಸಂದರ್ಭಾನುಸಾರ,

(ಬಿ) ಉಪಪ್ರಕರಣ (2)ರ ಪ್ರಕಾರ ಪ್ರಮಾಣಾನುಸಾರ ಮೌಲ್ಯದ ಮೇಲೆ ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳು.

(4) ಯಾವುದೇ ನ್ಯಾಯಾಲಯದ ಯಾವುದೇ ಆದೇಶ ಅಥವಾ ತೀರ್ಪು ಏನೇ ಇದ್ದರೂ, ಈ ಅಧ್ಯಾದೇಶದ ಮೂಲಕ ನಿಯಮಿಸಲಾದುದಕ್ಕೆ ಹೊರತಾಗಿ ಕ್ಲೇಮುದಾರರು ಯಾವುದೇ ಇತರೆ ನಷ್ಟಪರಿಹಾರದ ಹಕ್ಕನ್ನು ಹೊಂದಿರತಕ್ಕದ್ದಲ್ಲ.

(5) ಈ ಅಧ್ಯಾದೇಶದ ಮೇರೆಗಿನ ನಷ್ಟಪರಿಹಾರವನ್ನು, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ 13ನೇ ಪ್ರಕರಣದಡಿ ಕಮೀಷನರ್ ನಿರ್ಧರಿಸಿದಂತೆ ಅಂತಿಮ ನಷ್ಟಪರಿಹಾರ ಸಂದಾಯಕ್ಕೆ ಪ್ರಮಾಣಾನುಸಾರವಾಗಿ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು.

(6) ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ 8ನೇ ಪ್ರಕರಣ ಮತ್ತು 9ನೇ ಪ್ರಕರಣದೊಂದಿಗೆ ಅಸಂಗತವಾದ ನಷ್ಟಪರಿಹಾರದ ಸಂದರ್ಭದಲ್ಲಿ, ಕ್ಲೇಮುದಾರರು (3)ನೇ ಉಪಪ್ರಕರಣದಡಿ ಯಾವುದೇ ಅಂಥ ನಷ್ಟಪರಿಹಾರದ ಬಳಕೆಗೆ ನಷ್ಟಭರ್ತಿಗಾಗಿ ಸರ್ಕಾರಕ್ಕೆ ಹೊಣೆಗಾರರಾಗಿರತಕ್ಕದ್ದು.

(7) ಯಾವುದೇ ನ್ಯಾಯಾಲಯದ ಯಾವುದೇ ಆದೇಶ ಅಥವಾ ತೀರ್ಪಿಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿಗೆ ವಿರುದ್ಧವಾದುದು ಏನೇ ಇದ್ದರೂ, ಈ ಅಧ್ಯಾದೇಶದೊಂದಿಗೆ ಓದಲಾದಂತೆ ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ,

1996ರ 8ನೇ ಪ್ರಕರಣ ಮತ್ತು 9ನೇ ಪ್ರಕರಣದಲ್ಲಿ ನಿರ್ಧರಿಸಲಾದ ನಷ್ಟಪರಿಹಾರವು ಅಂತಿಮವಾಗಿರತಕ್ಕದ್ದು.

(8) ಈ ಅಧ್ಯಾದೇಶದೊಂದಿಗೆ ಯಾವುದೇ ನ್ಯಾಯಾಲಯದ ಯಾವುದೇ ಆದೇಶ ಅಥವಾ ತೀರ್ಪಿನ ಯಾವುದೇ ಅಸಂಗತತೆಯ ಸಂದರ್ಭದಲ್ಲಿ, 3ನೇ ಪ್ರಕರಣದ (1)ನೇ ಉಪಪ್ರಕರಣದಡಿ ಬಳಸಲಾದ ಭೂಮಿಗಳ ನಷ್ಟಪರಿಹಾರದ ನಿರ್ಧರಣೆಗಾಗಿ, ಈ ಅಧ್ಯಾದೇಶದ ಉಪಬಂಧಗಳು ಪ್ರಭಾವಿಯಾಗಿರತಕ್ಕದ್ದು.

**5. ಕ್ಲೇಮುದಾರರ ನಡುವೆ ವಿವಾದಗಳು ಉದ್ಭವವಾದಾಗ ನಷ್ಟಪರಿಹಾರದ ಸಂದಾಯ.-** (1) ನಷ್ಟಪರಿಹಾರವನ್ನು ಕ್ಲೇಮುಮಾಡುವ ಉದ್ದೇಶಕ್ಕಾಗಿ ಕ್ಲೇಮುದಾರರ ನಡುವೆ ಯಾವುದೇ ವಿವಾದಗಳಾದ ಸಂದರ್ಭದಲ್ಲಿ, ರಾಜ್ಯ ಸರ್ಕಾರವು ಈ ಅಧ್ಯಾದೇಶದಡಿ ನಿರ್ಧರಿಸಬಹುದಾದ ನಷ್ಟಪರಿಹಾರವನ್ನು ಕಮೀಷನರ್‌ನ ಮುಂದೆ ಠೇವಣಿ ಇರಿಸತಕ್ಕದ್ದು.

(2) ಸಕ್ಷಮ ಸಿವಿಲ್ ನ್ಯಾಯಾಲಯದ ಅಂತಿಮ ಡಿಕ್ರಿಯ ದೃಢೀಕೃತ ಪ್ರತಿಯನ್ನು ಕಮೀಷನರ್‌ಗೆ ಒದಗಿಸದೆ, ಕ್ಲೇಮುದಾರರ ನಡುವೆ ತಮ್ಮೊಳಗೆ ವಿವಾದಗಳು ಉದ್ಭವವಾದ ಸಂದರ್ಭದಲ್ಲಿ, ಯಾರೇ ಕ್ಲೇಮುದಾರನು ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ 13ನೇ ಪ್ರಕರಣದಡಿ ಕಮೀಷನರ್‌ನಿಂದ ಯಾವುದೇ ನಷ್ಟಪರಿಹಾರವನ್ನು ಹಿಂಪಡೆಯಲು ಹಕ್ಕುಳ್ಳವನಾಗಿರತಕ್ಕದ್ದಲ್ಲ:

ಪರಂತು, ತಮ್ಮೊಳಗಿನ ವಿವಾದಗಳ ಇತ್ಯರ್ಥದ ಅಂತಿಮ ಡಿಕ್ರಿಯು ಯಾರ ಪರವಾಗಿದೆಯೋ ಅಂಥ ಕ್ಲೇಮುದಾರನಿಗೆ ಕಮೀಷನರ್‌ನು ನಷ್ಟಪರಿಹಾರವನ್ನು ಬಿಡುಗಡೆಗೊಳಿಸುವ ಮೊದಲು, ಕಮೀಷನರ್‌ನು ಹಿತಾಸಕ್ತಿಯುಳ್ಳ ಯಾರೇ ವ್ಯಕ್ತಿಯ ಮೌಖಿಕ ವಿಚಾರಣೆಗೆ ಅವಕಾಶವನ್ನು ನೀಡತಕ್ಕದ್ದು.

ಮತ್ತು ಪರಂತು, ಅಪೀಲು ವ್ಯವಹರಣೆಗಳಲ್ಲಿ ಯಾವುದೇ ನ್ಯಾಯಾಲಯ ಅಂತಿಮ ಡಿಕ್ರಿಯ ಕಾರ್ಯಾಚರಣೆಯ ಮೇಲೆ ತಡೆಯಾಜ್ಞೆ ನೀಡಿದಲ್ಲಿ, ಕಮಿಷನರ್‌ನು ಯಾರೇ ಕ್ಲೇಮುದಾರನಿಗೆ ಯಾವುದೇ ನಷ್ಟಪರಿಹಾರವನ್ನು ಬಿಡುಗಡೆಗೊಳಿಸತಕ್ಕದ್ದಲ್ಲ.

(3) ಕಮೀಷನರ್, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ರ 20ನೇ ಪ್ರಕರಣದ ಅನುಸಾರ ಕ್ಲೇಮುದಾರನು ಅಂಥ ನಷ್ಟಪರಿಹಾರದ ನ್ಯಾಯಯುತ ಸ್ವೀಕೃತದಾರನೆಂದು ಪೂರ್ಣವಾಗಿ ಮನದಟ್ಟಾದ ಮೇಲೆ ಮಾತ್ರ (2)ನೇ ಉಪಪ್ರಕರಣದ ನಿಬಂಧನೆಗಳಡಿ ಕ್ಲೇಮುದಾರನಿಗೆ ನಷ್ಟಪರಿಹಾರವನ್ನು ವಿತರಿಸತಕ್ಕದ್ದು.

(4) ಉಪಪ್ರಕರಣ (2) ಮತ್ತು (3)ರಡಿ ಕಮೀಷನರ್‌ನ ತೀರ್ಮಾನವು ಅಂತಿಮವಾಗಿರತಕ್ಕದ್ದು.

**6. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.-** (1) ಈ ಅಧ್ಯಾದೇಶದ ಅನುಸರಣೆಯಲ್ಲಿ ಸದ್ಭಾವನೆಯಿಂದ ಏನನ್ನಾದರೂ ಮಾಡಿರುವ ಅಥವಾ ಮಾಡಲು ಉದ್ದೇಶಿಸಿದ ರಾಜ್ಯ ಸರ್ಕಾರದ ಯಾರೇ ಅಧಿಕಾರಿ ಅಥವಾ ಅದರ ಅಂಗಮಾಧ್ಯಮಗಳ ವಿರುದ್ಧ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

(2) ಯಾವುದೇ ನ್ಯಾಯಾಲಯದ ಯಾವುದೇ ಆದೇಶ ಅಥವಾ ತೀರ್ಪು ಏನೇ ಇದ್ದರೂ, ಈ ಅಧ್ಯಾದೇಶದ ಅನುಸರಣೆಯಲ್ಲಿ ಸದ್ಭಾವನೆಯಿಂದ ಏನನ್ನಾದರೂ ಮಾಡಿರುವ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಮೇರೆಗೆ ರಾಜ್ಯ ಸರ್ಕಾರದ ಯಾರೇ ಅಧಿಕಾರಿ ಅಥವಾ ಅದರ ಅಂಗಮಾಧ್ಯಮಗಳು ಯಾವುದೇ ಶಿಕ್ಷೆಗೆ ಹೊಣೆಯಾಗತಕ್ಕದ್ದಲ್ಲ.

**7. ಅಧ್ಯಾದೇಶದ ಅಧ್ಯಾರೋಹಿ ಪರಿಣಾಮ.-** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧ್ಯಾದೇಶಕ್ಕೆ ಅಸಂಗತವಾಗಿರುವುದಾವುದೂ, ಬೆಂಗಳೂರು ಅರಮನೆಗೆ ಅನ್ವಯವಾಗತಕ್ಕದ್ದಲ್ಲ.

**ಥಾವರ್‌ಚಂದ್ ಗೆಹ್ಲೋಟ್**
**ಕರ್ನಾಟಕದ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

**KARNATAKA ORDINANCE NO. 01 OF 2025**

**THE BANGALORE PALACE (UTILIZATION AND REGULATION OF LAND) ORDINANCE, 2025**

(Promulgated by the Governor of Karnataka in the seventy sixth year of the Republic of India and first published in the Karnataka Gazette Extra-ordinary on the 29th day of January, 2025)

An Ordinance to determine the utilization and regulation of land of the Bangalore Palace which has been acquired under the Bangalore Palace (Acquisition and Transfer) Act, 1996 (Karnataka Act 18 of 1996) and under which the land relating to the Bangalore Palace now vests with the State of Karnataka;

Whereas, the total value of the entire extent of 472 acres and 16 guntas of the Bangalore Palace has been determined in accordance with sections 8 and 9 of the Bangalore Palace (Acquisition and Transfer) Act, 1996 (Karnataka Act 18 of 1996), which has been determined to be Rupees Eleven Crores;

And whereas, the constitutional validity of the Bangalore Palace (Acquisition and Transfer) Act, 1996 (Karnataka Act 18 of 1996) has been upheld by the Hon'ble High Court of Karnataka, and there is no stay on the operation of the Bangalore Palace (Acquisition and Transfer) Act, 1996 (Karnataka Act 18 of 1996) by the Hon'ble Supreme Court in the appeal;

And whereas, by the judgment dated 10.12.2024, the Hon'ble Supreme Court in Contempt Case No. 688 of 2021 etc. has directed to grant transferable development rights, valuing the part of the Bangalore Palace ear-marked for the purpose of road widening, in accordance with the prevailing guidance value of the adjoining areas in accordance with section 45B of the Karnataka Stamp Act, 1957 (Karnataka Act 34 of 1957);

And whereas, the financial effect of the judgment of the Hon'ble Supreme Court will be grave on the exchequer of the State of Karnataka, and upon the urban planning of the city of Bengaluru. Further, the same is not consistent with the total compensation determined as per the Bangalore Palace (Acquisition and Transfer) Act, 1996 (Karnataka Act 18 of 1996);

And whereas, the Civil Appeals relating to the constitutional validity of the Bangalore Palace (Acquisition and Transfer) Act, 1996 (Karnataka Act 18 of 1996) are pending consideration of the Hon'ble Supreme Court and the grant of the transferable development rights will be an irreversible process, which will have a severe ramification on the State;

And whereas, the Karnataka Legislative Assembly and Karnataka Legislative Council are not in session, and the Hon'ble Governor of Karnataka is satisfied that the circumstances exist which render it necessary and expedient to exercise powers under Article 213 (1) of the Constitution of India, and promulgate the following Ordinance, namely:-

**1. Short title, application and commencement.-** (1) This Ordinance may be called the Bangalore Palace (Utilization And Regulation Of Land) Ordinance, 2025.

(2) This Ordinance shall apply to the Bangalore Palace.

(3) It shall come into force on 27.01.2025.

**2. Definitions.-** In this Ordinance, unless the context otherwise requires,-

(A) **"Bangalore Palace"** shall have the same meaning as defined in clause (2) of section 2 of the Bangalore Palace (Acquisition and Transfer) Act, 1996 (Karnataka Act 18 of 1996);

(B) **"Infrastructure Project"** includes any infrastructure development towards the larger public interest;

(C) **"Claimants"** shall have the same meaning as,-

(i) **"Legal Representatives"** and **"Heirs"** as defined in clause (5) of section 2 of the Bangalore Palace (Acquisition and Transfer) Act, 1996 (Karnataka Act 18 of 1996); and

(ii) **"Others", "Other Persons"** and **"Other Interested Persons"** as defined in clause (6) of section 2 of the Bangalore Palace (Acquisition and Transfer) Act, 1996 (Karnataka Act 18 of 1996);

(D) **"Compensation"** shall include any amount that is payable and shall also include transferable development rights;

(E) **"Commissioner"** shall have the same meaning as defined in clause (4) of section 2 of the Bangalore Palace (Acquisition and Transfer) Act, 1996 (Karnataka Act 18 of 1996);

(F) **"Transferable development rights"** shall have the same meaning as defined in clause (k) of sub-section (28) of section 14B of the Karnataka Town and Country Planning Act, 1961(Karnataka Act 11 of 1963) read with the Karnataka Town and Country Planning (Benefit of Development Rights) Rules, 2016;

(G) **"State Government"** shall mean the Government of Karnataka and include the instrumentalities of the Government of Karnataka such as the Bruhat Bengaluru Mahanagara Palike and the Bengaluru Development Authority.

**3. Utilization of Land for infrastructure project.-** (1) For the purpose of any infrastructure project, the State Government is empowered to utilize any portion of the Bangalore Palace, which is covered by section 4 of the Bangalore Palace (Acquisition and Transfer) Act, 1996 (Karnataka Act 18 of 1996).

(2) Notwithstanding any judgment or order of any court or any earlier decision taken by the State Government, the State Government is empowered to not go ahead with any infrastructure project, in whole or in part, under sub-section (1).

(3) If the State Government decides to not go ahead with any infrastructure project under sub-section (2), it shall:

(a) restore that part of the portion of the Bangalore Palace which was sought to be utilized under sub-section (1) but subsequently not gone ahead with or not utilized under sub-section (2);

(b) restore the possession of that part of portion the Bangalore Palace as it was, prior to when such land was sought to be utilized under sub-section (1), but subsequently not gone ahead with or not utilized under sub-section (2); and

(c) bear the entire expenditure for (a) and (b).

(4) Notwithstanding anything contained in any other law for time being in force, if the State Government has utilized any part of a portion of the Bangalore Palace under sub-section (1), the State Government shall pay compensation to the claimants as per this Ordinance under section 4.

**4. Compensation Payable for Utilization.-** (1) Notwithstanding any judgment or order of any court, or anything contained in any law for the time being in force, which is contrary to this Ordinance, the guidance value of the land shall be in accordance with this Ordinance for the purpose of compensation.

(2) For the purpose of calculation of compensation for any portion of the Bangalore Palace utilized under sub-section (1) of section 3 of this Ordinance, the proportionate value shall be as per section 8 and section 9 of the Bangalore Palace (Acquisition and Transfer) Act, 1996 (Karnataka Act 18 of 1996), which shall be deemed to be the guidance value under section 45B of the Karnataka Stamp Act, 1957 (Karnataka Act 34 of 1957) from the appointed day under the Bangalore Palace (Acquisition and Transfer) Act, 1996 (Karnataka Act 18 of 1996).

**Explanation I.** – For the determination of "guidance value", the valuation as per the Bangalore Palace (Acquisition and Transfer) Act, 1996 shall be deemed to be guidance value under section 45B of the Karnataka Stamp Act, 1957 (Karnataka Act 34 of 1957) notwithstanding any judgment or order of any court to the contrary.

**Explanation II.** – The expression "appointed day" shall have the same meaning as under sub-section (1) of section 2 of the Bangalore Palace (Acquisition and Transfer) Act, 1996 (Karnataka Act 18 of 1996), i.e. 21.11.1996.

(3) The compensation payable to the claimants shall be as follows:

(a) an amount being the proportionate value as per sub-section (2) proportionate to the extent of the land, or as the case may be;

(b) transferable development rights on the proportionate value as per sub-section (2).

(4) The claimants shall have no other right to compensation, other than as prescribed by this Ordinance and notwithstanding any order or judgment of any court.

(5) The compensation under this Ordinance shall be adjusted proportionately towards payment of final compensation as determined by the Commissioner under section 13 of the Bangalore Palace (Acquisition and Transfer) Act, 1996 (Karnataka Act 18 of 1996).

(6) The claimants shall be liable to indemnify the State Government for the utilization of any compensation under sub-section (3), in the event the same is inconsistent with section 8 and section 9 of the Bangalore Palace (Acquisition and Transfer) Act, 1996 (Karnataka Act 18 of 1996).

(7) Notwithstanding any order or judgment of any court to the contrary, or to any other law for the time being in force, the compensation determined under section 8 and section 9 of the Bangalore Palace (Acquisition and

Transfer) Act, 1996 (Karnataka Act 18 of 1996) read with this Ordinance shall be final.

(8) In the event of any inconsistency of any order or judgment of any court with this Ordinance, for the determination of compensation of lands utilized under sub-section (1) of section 3, the provisions of this Ordinance shall prevail.

**5. Payment of compensation on existence of disputes between the claimants.-** (1) In the event of any disputes between the claimants for the purpose of claiming compensation, the State Government shall deposit the compensation determinable under this Ordinance before the Commissioner.

(2) No claimant shall be entitled to withdraw any compensation from the Commissioner under section 13 of the Bangalore Palace (Acquisition and Transfer) Act, 1996 (Karnataka Act 18 of 1996), in the event of existence of inter-se disputes between the claimants, without furnishing a certified copy of the final decree of a competent civil court to the Commissioner:

Provided that before the Commissioner releases the compensation to such claimant in whose favour a final decree has been passed settling the inter-se disputes, the Commissioner shall provide an opportunity of oral hearing to any person interested.

Provided further that the Commissioner shall not release any compensation to any claimant under sub-section (2), if the operation of the final decree is stayed by any court in appellate proceedings.

(3) The Commissioner shall disburse the compensation to the claimant in terms of sub-section (2) only upon being fully satisfied that the claimant is the rightful recipient of such compensation in accordance with section 20 of the Bangalore Palace (Acquisition and Transfer) Act, 1996 (Karnataka Act 18 of 1996).

(4) The decision of the Commissioner under sub-section (2) and (3) shall be final.

**6. Protection for action taken in good faith.-** (1) No proceedings, civil or criminal, shall lie against any officer of the State Government or its instrumentalities, in respect of anything which is good faith, done or intended to be done, in pursuance of this Ordinance.

(2) Notwithstanding any order or judgment of any court, any officer of the State Government or its instrumentalities, shall not be liable for any punishment for any act or for anything which is in good faith, done or intended to be done, in pursuance of this Ordinance.

**7. Ordinance to have overriding effect.-** Notwithstanding anything contained in any other Act for the time being in force, which are inconsistent with this Ordinance, shall not apply to the Bangalore Palace.

The above translation of ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ಅಧ್ಯಾದೇಶ, 2025 (2025 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 01) be published in the official Gazette under Article 348 of the Constitution of India.

**THAAWARCHAND GEHLOT**
**GOVERNOR OF KARNATAKA**

By Order and in the name of
the Governor of Karnataka,

**G. Sridhar**
Secretary to Government
Department of Parliamentary Affairs
and Legislation